HH2

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2700\2014\ಸನಿಕಾಸ-2 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 26.9.2016

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಈ ಪ್ರಕರಣದಲ್ಲಿ ದೇವನಹಳ್ಳಿ ತಾಲ್ಲೂಕು ಬೂದಿಗೆರೆ ಅಮಾನಿಕೆರೆಯ ಸ. ನಂ:131/5ರ ಪಕ್ಕದಲ್ಲಿರುವ ಸರ್ಕಾರಿ ಜಾಗದಲ್ಲಿರುವ 60 ಸರ್ಕಾರಿ ನೀಲಗಿರಿ ಮರಗಳನ್ನು ಅಕ್ರಮವಾಗಿ ಕಟಾವು ಮಾಡಿ ಸಾಗಿಸಿದ್ದು ಕಂಡುಬಂದಿರುವುದರಿಂದ ಈ ನೀಲಗಿರಿ ಮರಗಳ ಅಂದಾಜು ಮೊತ್ತ ದೂರಿನಲ್ಲಿ ತಿಳಿಸಿದಂತೆ 1,50,000/- ರೂಗಳನ್ನು ಶ್ರೀ.ಕೆಂಚೇಗೌಡ ತಂದೆ ಗೋವಿಂದಪ್ಪ ರವರಿಂದ ವಸೂಲಿ ಮಾಡಿಕೊಂಡು ಸರ್ಕಾರಕ್ಕೆ ಭರಣ ಮಾಡಿಕೊಳ್ಳುವುದು ಸಮಂಜಸವೆಂದು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವ ಕುರಿತು.

*******

ಶ್ರೀ.ಎಸ್.ವೆಂಕಟೇಶಪ್ಪ ಬಿನ್ ಸೋಣ್ಣಪ್ಪ, ಗಂಗವಾರ ಚೌಡಪ್ಪನಹಳ್ಳಿ ಬೂದಿಗೆರೆ ಅಂಚೆ, ಚನ್ನರಾಯಪಟ್ಟಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ.ದಿಲೀಪ್ ಕುಮಾರ್.ಬಿ.ಎಂ., ಬೂದಿಗೆರೆ ಗ್ರಾಮ ಪಂಚಾಯ್ತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (2) ಕಾರ್ಯದರ್ಶಿ, ತಾಲ್ಲೂಕು ಕಛೇರಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (3) ಶ್ರೀ.ಆರ್.ಶಾಂತಕುಮಾರ್‌ಸ್ವಾಮಿ, ವಲಯ ಅರಣ್ಯಾಧಿಕಾರಿಗಳು, ದೇವನಹಳ್ಳಿ ವಲಯ, ದೇವನಹಳ್ಳಿ, (ಇನ್ನು ಮುಂದೆ "ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ಬೂದಿಗೆರೆ ಅಮಾನಿಕೆರೆಯ ದೂರುದಾರರ ಜಮೀನು ಸ. ನಂ: 131/5ರ ಪಕ್ಕದಲ್ಲಿ ಇರುವ ಸರ್ಕಾರಿ ಜಾಗದಲ್ಲಿ ಬೆಳಸಿದ್ದ ಸುಮಾರು 60 ನೀಲಗಿರಿ ಮರಗಳು ಸುಮಾರು 25 ವರ್ಷಗಳಿಂದ ಬೆಳದುನಿಂತಿದ್ದು ಅಂದಾಜು 150000/- ಬೆಲೆಬಾಳುವಂತಹದ್ದು ಆಗಿದ್ದವು. ಈ ನೀಲಗಿರಿ ಮರಗಳನ್ನು ಇದೇ ಗ್ರಾಮದ ಕೆಂಚೆಗೌಡ ತಂದೆ ಗೋವಿಂದಪ್ಪ ಎಂಬುವವರು ದಿ: 10.5.2014 ಮತ್ತು 11.5.2014ರಂದು ಸರ್ಕಾರಿ ರಜೆ ಇದ್ದಾಗ ಕಟಾವು ಮಾಡಿಸಿರುತ್ತಾರೆ. ಈ ವಿಷಯ ತಿಳಿದ ದೂರುದಾರರು ಸ್ಥಳೀಯ ಪೊಲೀಸ್ ಠಾಣೆಗೆ ವಿಷಯ ತಿಳಿಸಲಾಗಿ ಅವರು ಇದು ಅರಣ್ಯ ಅಧಿಕಾರಿಗಳ ವ್ಯಾಪ್ತಿಗೆ ಬರುತ್ತದೆ ಅಲ್ಲಿ ದೂರು ನೀಡಿ ಅಂತ ಹೇಳಿದರು ಪುನಃ ಎದುರುದಾರ ನಂ:3ರವರಿಗೆ ದೂರು ನೀಡಿದರೂ ಸಹ ಯಾವುದೇ ಕ್ರಮ ಕೈಗೊಳ್ಳದೆ ಎದುರುದಾರರು ಒಬ್ಬರಿಗೊಬ್ಬರು ಶಾಮೀಲಾಗಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ನೀಡಿದ್ದಾರೆ.

3) ಎದುರುದಾರ ನಂ:1 ರವರು ತಮ್ಮ ಆಕ್ಷೇಪಣೆಯಲ್ಲಿ ಅಮಾನಿ ಕೆರೆಯ ಸ. ನಂ: 131/5 ಹಾಗೂ ದೂರುದಾರರು ಬೂದಿಗೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವುದಿಲ್ಲ ಆದ್ದರಿಂದ ಸದರಿ ದೂರಿನ ವಿಷಯ ಅರಣ್ಯ ಇಲಾಖೆಗೆ ಒಳಪಟ್ಟಿರುತ್ತದೆ ಅಂತ ತಿಳಿಸಿದ್ದಾರೆ.

4) ಎದುರುದಾರ ನಂ:2 ರವರು ತಮ್ಮ ಆಕ್ಷೇಪಣೆಯಲ್ಲಿ ಗಂಗವಾರ ಚೌಡಪ್ಪನಹಳ್ಳಿ ಗ್ರಾಮದ ಕೆಂಚೇಗೌಡ ತಂದೆ ಗೋವಿಂದಪ್ಪ ಇವರು ದಿ: 10,11/5/2014 ರಂದು ಸರ್ಕಾರಿ ಜಾಗದಲ್ಲಿದ್ದ ನೀಲಗಿರಿ ಮರಗಳನ್ನು ಕಡಿದು ಸಾಗಿಸಿದ್ದು ನಿಜವಿದ್ದು ಈ ಬಗ್ಗೆ ಗ್ರಾಮಸ್ಥರು ಹೇಳಿಕೆ ನೀಡಿದ್ದಾರೆ. ಆದ್ದರಿಂದ ಕೆಂಚೇಗೌಡ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಆರ್.ಐ ರವರಿಗೆ ದಿ: 3.7.2014ರಂದು ತಾನು ವರದಿ ನೀಡಿದ್ದು ಆದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

5) ಎದುರುದಾರ ನಂ:3 ರವರು ತಮ್ಮ ಆಕ್ಷೇಪಣೆಯಲ್ಲಿ ತಾನು ಅಕ್ಕಪಕ್ಕದ ಸ್ಥಳೀಯರನ್ನು ವಿಚಾರಿಸಲಾಗಿ ಕೆಂಚೇಗೌಡರು ನೀಲಗಿರಿ ಮರ ಕಡಿದು ಸಾಗಿಸಿದ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ತಾನು ಈ ಬಗ್ಗೆ ಗೌಪ್ಯ ತನಿಖೆ ಕೈಗೊಂಡಿದ್ದು ಮರಗಳು ಪತ್ತೆಯಾಗಿರುವುದಿಲ್ಲ ಅಲ್ಲದೆ ಕೃತ್ಯ ನಡೆದು ಬಹಳ ದಿನಗಳಾಗಿದ್ದರಿಂದ ಮಾಲನ್ನು ಹಾಗೂ ಆಸಾಮಿಗಳನ್ನು ಪತ್ತೆ ಹಚ್ಚಲು ಸಾಧ್ಯವಾಗಿರುವುದಿಲ್ಲ ಅಂತ ತಿಳಿಸಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಅ) " ಎದುರುದಾರ ನಂ:2 ರವರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿದಂತೆ ಗಂಗವಾರ ಚೌಡಪ್ಪನಹಳ್ಳಿ ಗ್ರಾಮದ ಕೆಂಚೇಗೌಡ ಎನ್ನುವವರು ನೀಲಗಿರಿ ಮರಗಳನ್ನು ಅಕ್ರಮವಾಗಿ ಕಡಿದು ಸಾಗಿಸಿದ್ದಾರೆ ಅಂತ ದಿ: 12.5.2014ರಂದು ದೂರುದಾರರು ತಮ್ಮ ಕಛೇರಿಗೆ ದೂರು ನೀಡಿದ ನಂತರ ತಾನು ಹಾಗೂ ಆರ್.ಐ ರವರು ಸ್ಥಳ ಪರಿಶೀಲನೆ ಮಾಡಿ ನಾಡ ಕಛೇರಿ ಚೆನ್ನಪಟ್ಟಣ ಉಪ ತಹಶೀಲ್ದಾರ್ ರವರಿಗೆ ವರದಿ ನೀಡಿರುತ್ತಾರೆ. ನಂತರ ದೂರುದಾರರು ತಾಲ್ಲೂಕು ಕಛೇರಿಗೆ ದೂರು ಸಲ್ಲಿಸಿದಾಗ ಅದನ್ನು ಎಂ.ಎ.ಜಿ ಪಿ.ಆರ್. 84/14-15 ಎಂದು ಪ್ರಕರಣ ದಾಖಲಿಸಿಕೊಂಡು ದಿ: 25.6.2015ರಂದು ಎದುರುದಾರ ನಂ: 2 ರವರ ಕಡತಕ್ಕೆ ಬಂದಿದ್ದು ಆಗ ಪುನಃ ಪರಿಶೀಲಿಸಿ ಮಹಜರ್‌ನೊಂದಿಗೆ ವರದಿ ನೀಡಿದ್ದು ಇರುತ್ತದೆ. ಈ ವರದಿಯಲ್ಲಿ ದಿ: 10.5.2014 ಹಾಗೂ 11.5.2014ರಂದು ಕೆಂಚೇಗೌಡ ತಂದೆ ಗೋವಿಂದಪ್ಪ ರವರು ನೀಲಗಿರಿ ಮರಗಳನ್ನು ಕಡಿದು ಸಾಗಿಸಿದ್ದಾರೆ ಅಂತ ತಿಳಿಸಿದ್ದಾರೆ.

ಆ) ಎದುರುದಾರ ನಂ:2 ರವರು ತಮ್ಮ ವರದಿಯೊಂದಿಗೆ ಮಹಜರ್ ಪ್ರತಿಯನ್ನು ಹಾಜರುಪಡಿಸಿದ್ದು ಅದರಲ್ಲಿ ಸ್ಥಳೀಯ ಗ್ರಾಮಸ್ಥರ ಸಹಿಗಳನ್ನು ಪಡೆದಿದ್ದಾರೆ. ಈ ಗ್ರಾಮಸ್ಥರು ತಮ್ಮ ಹೇಳಿಕೆಯಲ್ಲಿ ಕೆಂಚೇಗೌಡ ತಂದೆ ಗೋವಿಂದಪ್ಪ ಇವರು ಅಕ್ರಮವಾಗಿ 60 ನೀಲಗಿರಿ ಮರಗಳನ್ನು ಕಟಾವು ಮಾಡಿ ಸಾಗಿಸಿದ್ದಾರೆ ಅಂತ ಹೇಳಿಕೆ ನೀಡಿದ್ದಾರೆ. ಸ. ನಂ: 131/5 ಇದು

ದೂರುದಾರರ ಜಮೀನು ಎಂದು ಹೇಳುವುದಕ್ಕೆ ಪಹಣಿ ಪತ್ರಿಕೆ ಹಾಜರುಪಡಿಸಿದ್ದಾರೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಗಂಗವಾರ ಚೌಡಪ್ಪನಹಳ್ಳಿ ಗ್ರಾಮದ ಕೆಂಚೇಗೌಡ ತಂದೆ ಗೋವಿಂದಪ್ಪ ಎನ್ನುವವರು ಅಕ್ರಮವಾಗಿ ಸರ್ಕಾರಿ ನೀಲಗಿರಿ ಮರಗಳನ್ನು ಕಟಾವು ಮಾಡಿ ಸಾಗಿಸಿದ್ದಾರೆ ಅಂತ ಕಂಡುಬರುತ್ತದೆ.

ಇ) ದೂರುದಾರರು ಎದುರುದಾರ ನಂ: 3ರವರಿಗೆ ನೀಲಗಿರಿ ಮರಗಳನ್ನು ಕಡಿದ ವಿಷಯವಾಗಿ ದೂರು ಸಲ್ಲಿಸಿದರೂ ಸಹ ಕಟಾವು ಮಾಡಿದ ವ್ಯಕ್ತಿಯ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೆ ಹಾಗೂ ನೀಲಗಿರಿ ಮರಗಳನ್ನು ಕಟಾವು ಮಾಡಿಲ್ಲವೆಂದು ಅಲ್ಲಗಳೆದು ಆಕ್ಷೇಪಣೆಗಳನ್ನು ಸಲ್ಲಿಸಿದ ಇವರು ಉದ್ದೇಶಪೂರ್ವಕವಾಗಿ ಅಥವಾ ಯಾವುದೇ ಪ್ರಭಾವಕ್ಕೆ ಒಳಗಾಗಿದ್ದಾರೆಂದು ಕಂಡುಬರುತ್ತದೆ. ಆದ್ದರಿಂದ ಎದುರುದಾರ ನಂ:3 ರವರು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯವಹಿಸಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

7) ಈ ಪ್ರಕರಣದಲ್ಲಿ ಗಂಗವಾರ್ ಚೌಡಪ್ಪನಹಳ್ಳಿ ಗ್ರಾಮದ ಕೆಂಚೇಗೌಡ ತಂದೆ ಗೋವಿಂದಪ್ಪ ಇವರು ಇದೇ ಗ್ರಾಮದ ಸ. ನಂ: 131/5ರ ಜಮೀನಿನ ಪಕ್ಕದಲ್ಲಿ ಇರುವ 60 ಸರ್ಕಾರಿ ನೀಲಗಿರಿ ಮರಗಳನ್ನು ಅಕ್ರಮವಾಗಿ ಕಟಾವು ಮಾಡಿ ಸಾಗಿಸಿದ್ದು ಕಂಡುಬಂದಿರುವುದರಿಂದ ಈ ನೀಲಗಿರಿ ಮರಗಳ ಅಂದಾಜು ಮೊತ್ತ ದೂರಿನಲ್ಲಿ ತಿಳಿಸಿದಂತೆ 150000/- ರೂಗಳನ್ನು ಶ್ರೀ.ಕೆಂಚೇಗೌಡ ತಂದೆ ಗೋವಿಂದಪ್ಪ ರವರಿಂದ ವಸೂಲಿ ಮಾಡಿಕೊಂಡು ಸರ್ಕಾರಕ್ಕೆ ಭರಣ ಮಾಡಿಕೊಳ್ಳುವುದು ಸಮಂಜಸವೆಂದು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1) ರಡಿಯಲ್ಲಿ ನಿರ್ದೇಶಿಸುವುದು ಅಗತ್ಯವಾಗಿರುತ್ತದೆ. ಆದ್ದರಿಂದ ಮಾನ್ಯ ಜಿಲ್ಲಾಧಿಕಾರಿಗಳು ತುಮಕೂರು ಇವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶಿಸುವ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12 (1)ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಹೊಂದಿದ್ದಾರೆ.

8) ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 26/9/16

**(ನ್ಯಾಯಾಮೂರ್ತಿ ಸುಬಾಷ್ ಬಿ ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**